



ಹಳ್ಳಿಯದು. ಚೆಲುವಿನ ನಶೆಯ ಪ್ರತಿರೂಪದಂತಹ ಸುಂದರ ಭೂದೃಶ್ಯಗಳು ಜೀವತಳೆದ ಗಂಧರ್ವಸ್ವಪ್ನಗಳಂತಿದ್ದವು. ಅಲ್ಲೊಂದು ರೆಸ್ಟೋರೆಂಟ್, ಮಾಹಿತಿ ಕೇಂದ್ರ, ಒಂದೆರಡು ವೈವಿಧ್ಯಮಯ ಪರಿಸರಸ್ನೇಹಿ ಅಂಗಡಿಗಳು, ಪರ್ವತದೆದೆಯಲ್ಲಿ ಎದ್ದಿರುವ ಸಣ್ಣಸಣ್ಣ ಮನೆಗಳು ಬಿಟ್ಟರೆ ಅಲ್ಲಿ ಮತ್ತೇನಿಲ್ಲ.

ಪ್ರಕೃತಿಯ ಚೆಲುವನ್ನು ಆಸ್ವಾದಿಸುವ ಜೊತೆಗೆ, ಕಯಾಕಿಂಗ್, ಬೋಟ್‌ಟ್ರಿಪ್‌ಗಳು, ಸುತ್ತಮುತ್ತಲಿನ ಪರ್ವತದೆದೆಗಳಲ್ಲಿ ವಿಶ್ರಮಿಸಿರುವ ಸಣ್ಣಸಣ್ಣ ಹಳ್ಳಿಗಳನ್ನು ಸುತ್ತುವುದು, ಪರ್ವತ–ಹಿಮಗಲ್ಲುಗಳಲ್ಲಿ ಚಾರಣ, ಸ್ಕೀಯಿಂಗ್, ಸ್ಥಳೀಯ ಸಾಂಸ್ಕೃತಿಕ ಸಂಭ್ರಮಗಳಿಗೆ ಸಾಕ್ಷಿಯಾಗುವುದು, ಕಾಡಿನಲ್ಲಿ ಕ್ಯಾಂಪಿಂಗ್ ಹೀಗೆ ಸಾಕಷ್ಟು ವಿರಾಮ ಚಟುವಟಿಕೆ, ಮನರಂಜನೆಗಾಗಿ ಪ್ರವಾಸಿಗರು ಎಲ್ಲ ಋತುವಿನಲ್ಲೂ ಅಲ್ಲಿಗೆ ಬರುತ್ತಾರೆ.

ಫ್ಲಾಮ್ ದಡದಲ್ಲಿ ಫೆರ್ರಿ ನಿಂತು, ಮೂರುಗಂಟೆ ಅಲ್ಲೇ ಸುತ್ತುತ್ತಾ, ರೆಸ್ಟೋರೆಂಟಿನಲ್ಲಿ ಊಟ ಮಾಡಿ, ನಾಲ್ಕುಗಂಟೆಗೆ ಹೋಗಿದ್ದು ಪ್ರಖ್ಯಾತ, ಪುಟ್ಟದಾದ ರೈಲ್ವೇ ಸ್ಟೇಷನ್ನಿಗೆ.

## ವಿಶ್ವಪ್ರಸಿದ್ಧ ಫ್ಲಾಮ್‌ಬಾನಾ ರೈಲು

19ನೇ ಶತಮಾನದಲ್ಲಿ ಈ ‘ಫ್ಲಾಮ್‌ಬಾನಾ’ ರೈಲ್ವೇಲೈನ್ ಅಸ್ತಿತ್ವಕ್ಕೆ ಬಂತು. ಅದಾದ ಮೇಲೆಯೇ ಈ ‘ಫ್ಲಾಮ್ ಹಳ್ಳಿ’ ಪ್ರವಾಸಿಗರು ಮುಗಿಬೀಳುವ ಮೆಚ್ಚಿನ ತಾಣವಾಗಿದೆ. ಇಲ್ಲಿನ ಒಂದೇ ರೈಲು ಕೇವಲ ಈ ಹಳ್ಳಿಯಿಂದ ‘ಮೀರ್ಡಾಲ್’ ಎನ್ನುವ ಸಮುದ್ರಮಟ್ಟದಿಂದ 867 ಮೀ. ಎತ್ತರದಲ್ಲಿರುವ ಪರ್ವತದ ತುದಿಗೇರಿಸುವ ಹಾದಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಇದು ನಾರ್ವೆಯ ‘ಓಸ್ಲೋಲೈನ್’ ಮತ್ತು ‘ಬೆರ್ಗೆನ್‌ಲೈನ್’ಗಳನ್ನು ಜೋಡಿಸುವ ಕೊಂಡಿ. ಕೇವಲ 20 ಕಿ.ಮೀ. ದೂರ, ಆದರೆ, ಒಂದೂವರೆ ಗಂಟೆ ಪ್ರಯಾಣ. ಪರ್ವತದ ಏರಿಳಿತದಲ್ಲಿ ನಿಧಾನಕ್ಕೆ ಸಾಗುತ್ತಾ, ದೈತ್ಯಗಾತ್ರದ ಮಡಿಲಲ್ಲಿ ಸುರಿದುಹೋಗಿರುವ ಅದ್ಭುತ ಸೌಂದರ್ಯವನ್ನು ಅನಾವರಣಗೊಳಿಸುತ್ತಾ ಪ್ರವಾಸಿಗರನ್ನು ಹುಚ್ಚಾಗಿಸುವ ಈ ಯಾನ ಜೀವಮಾನದ ಅತ್ಯಪೂರ್ವ ಕ್ಷಣ ಎನ್ನಿಸಿಬಿಡುತ್ತದೆ. ಎತ್ತರದ ದೈತ್ಯ ಮತ್ತು ಕಡಿದಾದ ಪರ್ವತಶ್ರೇಣಿ, ಅಗಾಧ ಕಣಿವೆಗಳು, ನದಿ, ಜಲಪಾತ, ಹಿಮ, ಸೇತುವೆಗಳು, ಸುರಂಗಗಳು, ಅಬ್ಬಬ್ಬಾ, ಅದೊಂದು ಇಹವನ್ನೇ ಮರೆಸಿಬಿಡುವ ಸ್ವರ್ಗಸೀಮೆ. ಇಲ್ಲಿಗೆ ಬರುವ ಲಕ್ಷಾಂತರ ಮಂದಿ ಕೇವಲ ಈ ಫ್ಲಾಮ್–ಮೀರ್ಡಾಲ್ ರೈಲ್ವೇ ಲೈನಿನ ನಡುವಣ 20 ಕಿ.ಮೀ. ಹಾದಿಯ ಅದ್ಭುತಸೌಂದರ್ಯ ಸವಿಯಲೇ ಬರುತ್ತಾರೆ.

ಹಾದಿಯುದ್ದಕ್ಕೂ ರಮ್ಯ ದೃಶ್ಯಗಳ ಎದೆಗಿಳಿಸಿಕೊಳ್ಳುತ್ತಾ ಮೀರ್ಡಾಲ್ ಸ್ಟೇಷನ್ನಲ್ಲಿ ಇಳಿದರೆ, ಅದು ಅಕ್ಷರಶಃ ಹಿಮಲೋಕ. ಅಲ್ಲಿ ಕೇವಲ ಪರ್ವತದ ತೊಡೆಯಲ್ಲಿ ಕೂತ ಈ ಸ್ಟೇಷನ್, ಅದರಲ್ಲೊಂದು ರೆಸ್ಟೋರೆಂಟ್ ಮಾತ್ರ. ಸುತ್ತ ವರ್ತುಲಾಕಾರದಲ್ಲಿ ಕೋಟೆಯಂತೆ ಧೀಮಂತವಾಗಿ ನಿಂತಿವೆ ಮುಗಿಲೆತ್ತರದ ಹಿಮವತ್ಪರ್ವತಗಳು. ಹಿಮದ ಮೇಲೆ ಟೊಳ್ಳಾಗಿರುವ ಹಿಮಕುಳಿಗಳೂ ಇರುವುದರಿಂದ ಎಚ್ಚರಿಕೆಯಿಂದ ಓಡಾಡಬೇಕು.

ಇನ್ನೊಂದು ರೈಲು ಹತ್ತಿದ್ದು ‘ಯೇಲೋ’ ಎನ್ನುವ ಊರಿಗೆ. ಏರುಹಾದಿಯಲ್ಲಿ ಹೊರಟ ಹತ್ತೇ ನಿಮಿಷಕ್ಕೆ ಅತಿ ಉದ್ದದ ಸುರಂಗವೊಂದು ಎದುರಾಯ್ತು. ಒಳಹೊಕ್ಕರೆ ಎರಡೂ ಬದಿ ದೈತ್ಯ ಪರ್ವತಗಳ ಬೆತ್ತಲೆದೆ. ಮೈಮನ ಝುಮುಝುಮು ಎಂದಿತು. ಕತ್ತಲಲೋಕ ಇನ್ನೆಷ್ಟೋ ಎನ್ನುವಾಗಲೇ ಝಗ್ಗನೆ ಸೂರ್ಯನೇ ಎದುರಾದಂತೆ ಬೆಳಕು ಹೊತ್ತಿತು. ಮಂದಗತಿಯಲ್ಲಿ ತೆವಳಿದ ರೈಲು ನಿಂತಿದ್ದು ಅದ್ಭುತವಾದ ಜಲಪಾತವೊಂದರ ಎದುರಿಗೇ, ಅತೀ ಸನಿಹದಲ್ಲಿ...! ಇದು ‘ಶೋಸ್‌ಫಾಸೆನ್’ ಜಲಪಾತ.

## ಪರ್ವತದ ಎದೆಯಿಂದ ಪ್ರವಾಹ

ಶೋಸ್‌ಫಾಸೆನ್ ಜಲಪಾತ ದೈತ್ಯ ಪರ್ವತದ ಎದೆಯಿಂದ, 738 ಅಡಿಗಳ ಮೇಲಿನಿಂದ ಅಗಲವಾಗಿ, ಹಂತಹಂತದಲ್ಲಿ ರಭಸವಾಗಿ ಪ್ರವಾಹದಂತೆ ಕೆಳಬೀಳುತ್ತದೆ. ಇಲ್ಲಿ ರೈಲು ಹತ್ತುನಿಮಿಷ ನಿಲ್ಲುತ್ತದೆ. ಇದು ಪ್ರವಾಸಿಗರಿಗಾಗಿಯೇ ಮಾಡಿರುವ ವ್ಯವಸ್ಥೆ. ಅತ್ಯಂತ ಸನಿಹದಲ್ಲಿ ಮೂರು ಭಾಗಗಳಾಗಿ ಧುಮುಕುವ ಜಲಪಾತದ ಸೌಂದರ್ಯ, ಆರ್ಭಟದ ಮೊರೆತ, ಮೈಮೇಲೆ ದಬದಬನೆ ಬೀಳುವ ತುಂತುರುಹನಿಗಳು ನಮ್ಮ ಮಾತು ಹೊರಬೀಳದಂತೆ ಮಂತ್ರಮುಗ್ಧವಾಗಿಸಿಬಿಡುತ್ತದೆ.

ನೋಡನೋಡುತ್ತಿದ್ದಂತೆ ಜಲಪಾತದ ಮೇಲಿನ ಬಂಡೆಯ ಮೇಲೆ ಕೆಂಪುಬಣ್ಣದ ಉಡುಗೆ ಧರಿಸಿದ ಸುಂದರಿಯೊಬ್ಬಳು ಕಣ್ಣಿಗೆ ಬಿದ್ದಾಗ ಎಲ್ಲರಿಗೂ ಗಾಬರಿ. ಆ ಪರ್ವತಾಗ್ರ, ಆ ರಭಸದ ಜಲಪಾತದ ನಡುವೆ ಹೆಣ್ಣೊಬ್ಬಳು ಹೀಗೆ...! ಎಲ್ಲರೆದೆ ಡವಡವಿಸುವಾಗಲೇ ಅವಳು ಮಾದಕನೃತ್ಯ ಭಂಗಿಯಲ್ಲಿ ಕುಣಿದಳು, ಕುಣಿಯುತ್ತಲೇ ಕೆಳಹಾರಿ ಕಣ್ಮರೆಯಾಗಿಬಿಟ್ಟಳು. ನಮ್ಮ ಜೀವ ಬಾಯಿಗೆ ಬಂದಂತಾಯ್ತು ‘ಅವಳು ಆತ್ಮಹತ್ಯೆ ಮಾಡಿಕೊಂಡಳೇ?’ ನಮ್ಮ ಆತಂಕ. ಆದರೆ, ಅಲ್ಲಿ ಹಾರಿದವಳು ಕ್ಷಣಾರ್ಧದಲ್ಲಿ ಇನ್ನೂ ಮೇಲೆ ಪ್ರತ್ಯಕ್ಷವಾಗಿ ಮತ್ತೆ ನೃತ್ಯ ಮಾಡಿದಾಗ, ಅದರೊಡನೆ ಮನಸ್ಸನ್ನು ಸೆರೆಹಿಡಿಯುವಂಥ ಮೆಲುಸಂಗೀತವೂ ಕೇಳಿದಾಗ ಅರ್ಥವಾಗಿತ್ತು – ಅದು ಪ್ರವಾಸಿಗರನ್ನು ಸೆಳೆಯಲು ನಿಯೋಜನೆಗೊಂಡ ಶೋ ಎಂದು. ನಾರ್ವೆಜಿಯನ್ ಬ್ಯಾಲೆ ಶಾಲೆಯ ವಿದ್ಯಾರ್ಥಿನಿಯರು ‘ಹಲ್ದ್ರಾ’ ಎಂಬ ಜನಾಂಗದ ಜಾನಪದ ಕತೆಯೊಂದನ್ನು ನೃತ್ಯದ ಮೂಲಕ ಪ್ರಸ್ತುತಪಡಿಸಿದ್ದು, ತೀರಾ ಹೊಸತು ಮತ್ತು ಆಕರ್ಷಣೀಯವಾದ ಅನುಭವವಾಗಿತ್ತು.

ಈ ಫ್ಲಾಮ್, ಮೀರ್ಡಾಲ್ ಹತ್ತಿರದಲ್ಲೇ ಅನೇಕ ಹಳ್ಳಿಗಳಿದ್ದು ಪ್ರವಾಸಿಗರು ಅಲ್ಲಿ ಎಲ್ಲ ರೀತಿಯ ಸೌಲಭ್ಯಗಳೊಂದಿಗೆ, ಕಡಿಮೆ ಬಜೆಟ್‌ನಲ್ಲಿ ಹೋಟೆಲ್, ಅಪಾರ್ಟ್‌ಮೆಂಟುಗಳಲ್ಲೂ ಉಳಿದು ಅತ್ಯಪೂರ್ವ ಪ್ರವಾಸವನ್ನು ಮಾಡಬಹುದು. ನಾರ್ವೆಗೆ ಹೋದವರು ಮರೆಯದೇ ಈ ಅನುಭವ ಪಡೆಯಬೇಕು. ■